ವಿದ್ಯಾರ್ಥಿಗಳಿಂದ ಕೇಳುತ್ತಿದ್ದೇನೆ. ಆದ್ದರಿಂದ ಆ ಖಾಲಿ ಹುದ್ದೆಗಳನ್ನು ಯಾವುದೇ ರೀತಿಯಿಂದಲಾದರೂ ತುಂಬಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಆಯಿತು, ತಾವು ಹೇಳಿದ್ದೀರಲ್ಲಾ, ಸರ್ಕಾರದವರು ತಾವು ಹೇಳಿದ್ದನ್ನು ಕೇಳಿದ್ದಾರೆ, ಅದನ್ನು ಸರ್ಕಾರದ ಗಮನಕ್ಕೆ ತಾವು ತಂದಿದ್ದೀರಿ, ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ.

ಊ) ಬೀದರ್ ಜಿಲ್ಲೆಯ ಎಡಗಾಪುರ ಗ್ರಾಮದ ಶಾಲಾ ಮುಖ್ಯೋಪಾಧ್ಯಾಯರು ಕಣ್ಮರೆಯಾಗಿರುವ ಬಗ್ಗೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೇ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಎಡಗಾಪುರ ಎಂಬಲ್ಲಿ ಮುಖ್ಯೋಪಾಧ್ಯಾಯರೊಬ್ಬರು ಜೂನ್ 27ರಿಂದ ಕಣ್ಮರೆಯಾಗಿದ್ದಾರೆ. ಅದರ ಹಿಂದಿನ ದಿನ ಮಾನ್ಯ ಗೃಹ ಸಚಿವರು ಅಲ್ಲಿಯ ಗುರುಭವನದ ಉದ್ಘಾಟನೆಗೋಸ್ಕರ ಹೋಗಿದ್ದಾಗ, ಆ ಶಿಕ್ಷಕರು ಅಲ್ಲಿ ಉಪಸ್ಥಿತರಿದ್ದರು. ಅದರ ನಂತರ ಶಾಲೆಗೆ ಬಂದಂತಹ ಮುಖ್ಯೋಪಾಧ್ಯಾಯರು ಕಣ್ಮರೆಯಾಗಿದ್ದಾರೆ. ಆದಾದ ನಂತರ, ಆ ಮನೆಯವರು ಗಾಬರಿಯಾಗಿ ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಅದಕ್ಕೆ ಕಾರಣ ಕೆಲವರು ಏನು ಸಂಶಯ ಪಡುತ್ತಿದ್ದಾರೆ ಎಂದರೆ, ಅಲ್ಲಿ ಇನ್ನೊಬ್ಬರು ಮುಖ್ಯೋಪಾಧ್ಯಾಯರು, ಅಂದರೆ ಅಡಿಷನಲ್ ಹೆಡ್ ಮಾಸ್ಟರ್ ಇದ್ದಾರೆ, ಅವರಿಗೂ ಇವರಿಗೂ ಯಾವುದೋ ಒಂದು ಹಣಕಾಸಿನ ವ್ಯವಹಾರದಲ್ಲಿ ಅಥವಾ ದಾಖಲಾತಿಗಳನ್ನು ಕೊಡತಕ್ಕಂಥದ್ದರಲ್ಲಿ ಒಂದು ಮಿಸ್ ಅಂಡರ್‌ಸ್ಟ್ಯಾಂಡಿಂಗ್ ಬಂದು, ವೈಷಮ್ಯ ಬಂದು, ಏನೋ ಆಗಿರಬಹುದು ಎನ್ನತಕ್ಕಂಥ ಅನುಮಾನ ಬಂದಿದೆ. ಅಲ್ಲಿ ದಲಿತ ಸಂಘಟನೆಗಳೆಲ್ಲಾ ಧರಣಿ ಮಾಡಿದ್ದಾರೆ. ಅಲ್ಲಿಗೆ ರಾಜ್ಯಪಾಲರು ಭೇಟಿಕೊಟ್ಟಾಗ ಅವರಿಗೂ ಕೂಡ ಮನವಿಕೊಟ್ಟಿದ್ದಾರೆ; ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. 15 ದಿನಗಳಾದರೂ ಆ ಒಂದು ಮುಖ್ಯೋಪಾಧ್ಯಾಯರನ್ನು ಗುರುತಿಸತಕ್ಕಂಥ ಪತ್ತೆ ಮಾಡತಕ್ಕಂಥ ಕಾರ್ಯಕ್ರಮ ಆಗಿಲ್ಲ. ಒಬ್ಬ ಅಧಿಕಾರಿ ಕಣ್ಮರೆಯಾಗಿರುವುದರ ಬಗ್ಗೆ ಸರ್ಕಾರ ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿದೆ? ಆದಷ್ಟು ಬೇಗ ಅವರನ್ನು ಪತ್ತೆ ಹಚ್ಚಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಮತ್ತು ಇದರ ಬಗ್ಗೆ ವಿಚಾರಣೆ ನಡೆಸಬೇಕು. ಈ ಬಗ್ಗೆ ಸರ್ಕಾರ ಉತ್ತರ ನೀಡಬೇಕೆಂದು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಸಂಬಂಧಪಟ್ಟಂತಹ ಎಸ್.ಪಿ.ಯವರಿಂದ ಅದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಅದರ ಬಗ್ಗೆ ಸವಿಸ್ತಾರವಾದಂತಹ ಮಾಹಿತಿಯನ್ನು ಒದಗಿಸಿಕೊಡುತ್ತೇನೆ.

ಋ) ಪ್ರೌಢ ಶಾಲೆಗಳಲ್ಲಿ ಜಾರಿಗೊಳಿಸುತ್ತಿರುವ 'ಮಾಹಿತಿ ಸಿಂಧು' ಕಾರ್ಯಕ್ರಮದಲ್ಲಿನ ಕಂಪ್ಯೂಟರ್ ಶಿಕ್ಷಕರು ಮುಷ್ಕರ ನಡೆಸುತ್ತಿರುವುದರ ಬಗ್ಗೆ

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಇವತ್ತಿನಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಪ್ರಿಯವಾಗಿರತಕ್ಕಂಥ, ಪ್ರೌಢ ಶಾಲೆಗಳಲ್ಲಿ ಜಾರಿಗೊಳಿಸುತ್ತಿರುವ 'ಮಾಹಿತಿ ಸಿಂಧು' ಕಾರ್ಯಕ್ರಮದ ಕಂಪ್ಯೂಟರ್ ಶಿಕ್ಷಕರು ಮುಷ್ಕರ ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಕಳೆದೆರಡು ವರ್ಷಗಳಿಂದ ಸುಮಾರು ಒಂದು ಸಾವಿರ ಪ್ರೌಢ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಇದರಲ್ಲಿನ ಪ್ರೌಢ ಶಾಲೆಗಳನ್ನು 'ಎ' ವರ್ಗ, 'ಬಿ' ವರ್ಗ ಮತ್ತು 'ಸಿ' ವರ್ಗ